## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಚಿಕ್ಕಮಗಳೂರು

**ಸೆಷನ್ಸ್ ಕೇಸ್ ನಂ.ಃ2ಃ2021**

ಫಿರ್ಯಾದುದಾರರು ರಾಜ್ಯದ ಪರವಾಗಿ ಜಯಪುರ ಪೋಲೀಸ್.

ವಿರುದ್ಧ

ಆರೋಪಿ ಶ್ರೀರಾಜ ಯಾನೆ ಅಣ್ಣಯ್ಯ.

**ದೋಷಾರೋಪಣೆ**

ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶುಭ ಗೌಡರ್, ಬಿ.ಎ., ಎಲ್.ಎಲ್.ಬಿ., ಆದ ನಾನು

ಶ್ರೀರಾಜ ಯಾನೆ ಅಣ್ಣಯ್ಯ, ಬಿನ್ ಧರ್ಮಯ್ಯ, 26 ವರ್ಷ, ಕೂಲಿ ಕೆಲಸ, ವಾಸಃ ಮಠದಗದ್ದೆ, ಹೆಡ್ಸೆ ಗ್ರಾಮ, ಕೊಪ್ಪ ತಾಲ್ಲೂಕು.

ನಿನ್ನ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ನೀನು ಆರೋಪಿ ಮತ್ತು ಹೆಡ್ಸೆ ಗ್ರಾಮದ ಮಠದ ಗದ್ದೆಯಲ್ಲಿ ವಾಸವಾಗಿರುವ ಸಾಕ್ಷಿ-1 ಸುರೇಶ್ ರವರ ಅಕ್ಕನ ಮಗಳಾದ ಮೃತೆ ಕುಃನಾಗರತ್ನ ಪರಸ್ಪರ ಪ್ರೀತಿಸುತ್ತಿದ್ದು, ಮದುವೆಯಾಗಬೇಕೆಂದು ಇಚ್ಚಿಸಿ ದೈಹಿಕ ಸಂಪರ್ಕ ಮಾಡಿದ್ದು, ಅದರ ಪರಿಣಾಮವಾಗಿ ಕುಃ ನಾಗರತ್ನ ಗರ್ಬಿಣಿಯಾಗಿದ್ದು, ಈ ವಿಚಾರ ನಿನಗೆ ಗೊತ್ತಾಗಿ, ಬೇರೆ ಯಾರಿಗೂ ಊರಿನಲ್ಲಿ ಈ ವಿಚಾರ ತಿಳಿಯಬಾರದೆಂದು, ಮೃತಳ ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ಗರ್ಭವನ್ನು ಅಬಾಶನ್ ಮಾಡಬೇಕೆಂಬ ಉದ್ದೇಶದಿಂದ, ಮೃತ ನಾಗರತ್ನ ಅಬಾಶನ್ ಮಾತ್ರೆಗಳನ್ನು ತಿಂದರೆ ಜೀವಕ್ಕೆ

ಹಾನಿಯಾಗುತ್ತದೆ ಎಂದು ತಿಳಿದಿದ್ದರೂ ಸಹಾ, ಯಾವುದೇ ಮಂಜಾಗ್ರತೆ ಕ್ರಮ ಕೈಗೊಳ್ಳದೆ, ನೀನು ಆರೋಪಿ ದಿನಾಂಕಃ12-2-2019 ರಂದು ಬೆಳಿಗ್ಗೆ ಯಾವುದೋ ಮಾತ್ರೆಗಳನ್ನು ತಂದು ನಾಗರತ್ನಳಿಗೆ ಅವಳ ಮನೆಯಲ್ಲಿ ಕೊಟ್ಟು, ಈ ಮಾತ್ರೆಗಳನ್ನು ತಿಂದರೆ ಗರ್ಭ ಕರಗುತ್ತದೆ ಎಂದು ತಿಳಿಸಿದ್ದರಿಂದ, ಮೃತ ನಾಗರತ್ನ ನೀನು ಆರೋಪಿ ತಂದುಕೊಟ್ಟ ಮಾತ್ರೆಗಳನ್ನು ತಿಂದಿದ್ದರಿಂದ, ಆಕೆಗೆ ಗರ್ಭ ಪಾತವಾಗಿ ವಿಪರೀತ ರಕ್ತಸ್ರಾವವಾಗಿ, ಹೊಟ್ಟೆಯ ಒಳಗೆ ಗರ್ಭ ಕೋಶದಲ್ಲಿ ನಂಜಾಗಿ, ಚಿಕಿತ್ಸೆ ಕೊಡಿಸಿದರೂ ಸಹಾ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ18-2-2019 ರಂದು ಬೆಳಿಗ್ಗೆ 5-35 ಗಂಟೆ ಸಮಯದಲ್ಲಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ನಾಗರತ್ನ ಮೃತಪಟ್ಟಿದ್ದು, ನೀನು ಆರೋಪಿ ನೀಡಿದ ಮಾತ್ರೆಗಳನ್ನು ತಿಂದಿದ್ದರಿಂದಲೇ ಕುಃನಾಗರತ್ನ ಮೃತಪಟ್ಟಿದ್ದು, ಕಾರಣ ನೀನು ಭಾ.ದಂ.ಸಂ. ಕಲಂ 314 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀಯಾ ಎಂದು ನಿನ್ನ ಮೇಲೆ ಅಪಾಧನೆ ಮಾಡಿದ್ದೇನೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

ದಿನಾಂಕಃ13-10-2021.

ಸಹಿಃ-

( ಶುಭ ಗೌಡರ್),
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

ಕೆಟಿಪಿ